

ದಿನೇಶ್ – ಒಂದು ವಿನೋದದ ಕ್ಷಣ



ತರುಣ ವಿಷ್ಣುವರ್ಧನ್



ಪ್ರಗತಿ ಅಶ್ವತ್ಥ್ ನಾರಾಯಣ್

# ಅಮರ 'ನೆನಪು'ಗಳಿಗೆ ಪ್ರಗತಿ ಫ್ರೇಮ್

**ಚಿತ್ರಪಟ ಕಥನ**

**ಚಂದನವನದ ನಡಿಗೆಯ ಗುರುತುಗಳನ್ನು ಸದ್ದಿಲ್ಲದೆ ದಾಖಲಿಸುತ್ತ ಬಂದಿರುವ ಅಪರೂಪದ ಸ್ಥಿರಚಿತ್ರ ಛಾಯಾಗ್ರಾಹಕ ಪ್ರಗತಿ ಅಶ್ವತ್ಥ್ ನಾರಾಯಣ್. ಈಗ 'ನೆನಪು – ಅಶ್ವತ್ಥ್ ಕ್ಯಾಮೆರಾ ಕಣ್ಣಲ್ಲಿ' ಎಂಬ ಹೆಸರಿನಲ್ಲಿ ಅವರು ತೆಗೆದ ಛಾಯಾಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ.**

■ ಸುಮಲತಾ ಎನ್

ನಾಲ್ಕೂವರೆ ದಶಕಗಳ ಕಾಲ ಸಿನಿಮಾ ರಂಗದ ಹಲವು ಮಜಲುಗಳನ್ನು ತಮ್ಮ ಕ್ಯಾಮೆರಾ ಕಣ್ಣಲ್ಲಿ ಕಂಡವರು ಕನ್ನಡ ಚಿತ್ರರಂಗದ ಹಿರಿಯ ಸ್ಥಿರಚಿತ್ರ ಛಾಯಾಗ್ರಾಹಕ 'ಪ್ರಗತಿ ಅಶ್ವತ್ಥ್ ನಾರಾಯಣ್'. ತೆರೆಯ ಮುಂದೆ ಹಿಂದಿನ ಘಟಾನುಘಟಿಗಳನ್ನು ತಮ್ಮ ಫ್ರೇಮ್‌ನೊಳಗೆ ದಾಖಲಿಸುತ್ತ ಬಂದಿರುವ ಅವರು, ತಮ್ಮ ವೃತ್ತಿ ಬದುಕಿನಲ್ಲಿ ಸೆರೆಹಿಡಿದಿರುವ ಅಪರೂಪದ ಛಾಯಾಚಿತ್ರಗಳನ್ನು 'ನೆನಪು – ಅಶ್ವತ್ಥ್ ಕ್ಯಾಮೆರಾ ಕಣ್ಣಲ್ಲಿ' ಮೂಲಕ ತೆರೆದಿಡುತ್ತಿದ್ದಾರೆ.

''ಚಿತ್ರರಂಗದಲ್ಲಿರುವ ಸಣ್ಣ ಸಣ್ಣ ಕಲಾವಿದರನ್ನೂ ಈಗ ಸುಲಭವಾಗಿ ಗುರುತಿಸಿಬಿಡುತ್ತೇವೆ. ಅಷ್ಟು ಆಯ್ಕೆಗಳಿವೆ. ಆಗ ಹಾಗಿರಲಿಲ್ಲ. ಸಿನಿಮಾ ತೆರೆ ಹಿಂದೆ ಕೆಲಸ ಮಾಡುತ್ತಿದ್ದ ಸಂಗೀತ ನಿರ್ದೇಶಕರು, ಬರಹಗಾರರು ಯಾರೆಂದೇ ತಿಳಿಯುತ್ತಿರಲಿಲ್ಲ. ಎಚ್.ಎಲ್.ಎನ್. ಸಿಂಹ ಅವರಂಥ ನಿರ್ದೇಶಕರು ಯಾರೆಂದೇ ಜನರಿಗೆ ಗೊತ್ತಿರಲಿಲ್ಲ. ಜಿ.ಕೆ. ವೆಂಕಟೇಶ್ ಅವರ ಅದೆಷ್ಟು ಹಾಡುಗಳನ್ನು ಕೇಳುತ್ತೇವೆ, ಆದರೆ ಅವರು ಹೇಗಿದ್ದರು ಎಂಬುದೇ ಗೊತ್ತಿರುವುದಿಲ್ಲ. ಇಂಥವರ ಅಪರೂಪದ ಚಿತ್ರಗಳ ಸಂಗ್ರಹವನ್ನು ಈ 'ನೆನಪು' ಮುಂದಿಡಲಿದೆ'' ಎಂದು ತಮ್ಮ ಛಾಯಾಚಿತ್ರ ಪ್ರದರ್ಶನದ ಉದ್ದೇಶ ತೆರೆದಿಡುತ್ತಾರೆ ಅಶ್ವತ್ಥ್ ನಾರಾಯಣ್ ಅವರು.

ಕನ್ನಡ ಸಿನಿಮಾ ಕಲಾವಿದರು, ನಟ ನಟಿಯರ ಜೊತೆಗೆ, ಆಗಿನ ತಂತ್ರಜ್ಞರು, ಕ್ಯಾಮೆರಾಮೆನ್, ಬರಹಗಾರರು, ಗೀತೆ ರಚನೆಕಾರರು, ಸಂಗೀತ ನಿರ್ದೇಶಕರ ಛಾಯಾಚಿತ್ರಗಳು ಪ್ರದರ್ಶನದಲ್ಲಿರಲಿವೆ. ಅಷ್ಟೇ ಅಲ್ಲದೆ ಸಿನಿಮಾರಂಗದ ಪ್ರಮುಖ ಸಭೆ ಸಮಾರಂಭಗಳು, ಕನ್ನಡ ಸಾಹಿತಿಗಳು, ಬೆಂಗಳೂರಿಗೆ ಭೇಟಿ ನೀಡಿದ್ದ ರಾಜ್ ಕಪೂರ್, ರಾಜೇಶ್ ಖನ್ನಾರಂಥ ಹಲವು ಹಿಂದಿ ಮೇರು ತಾರೆಯರ ಫೋಟೊಗಳು, ಆಗಿನ